**ಪ್ರಿಯತಮೆ:** ನಾವು ಮದುವೆಯಾದ ಮೇಲೆ, ನಿಮ್ಮೆಲ್ಲ ಮಾನಸಿಕ ಒತ್ತಡ ಕಡಿಮೆ ಮಾಡುತ್ತೇನೆ.
**ಪ್ರಿಯಕರ:** ನನಗೆ ಯಾವ ಮಾನಸಿಕ ಒತ್ತಡಗಳು ಇಲ್ಲವಲ್ಲ.
**ಪ್ರಿಯತಮೆ:** ನಾನು ಹೇಳಿದ್ದು ಮದುವೆ ಆದ ಮೇಲೆ!

***

**ಡಾಕ್ಟರ್:** ನೀನು ದಿನಾ ವ್ಯಾಯಾಮ ಮಾಡಬೇಕು.
**ರೋಗಿ:** ವ್ಯಾಯಾಮದ ಬದಲು ಕ್ರಿಕೆಟ್, ಫುಟ್ ಬಾಲ್ ಆಟ ಆಡುತ್ತಲೇ ಇದ್ದೇನೆ.
**ಡಾಕ್ಟರ್:** ಹಾಗಾದ್ರೆ ಸರಿ, ನೀನು ಆಡೋದು ಎಲ್ಲಿ?
**ರೋಗಿ:** ಮೊಬೈಲ್‌ನಲ್ಲಿ ಸಾರ್!

***

**ಮಗ:** ಅಮ್ಮ, ನಾನು ಜೀವನದಲ್ಲಿ ಯಶ ಕಾಣಬೇಕಾದರೆ ಮೊದಲಿಗೆ ಏನು ಮಾಡಬೇಕು?
**ಅಮ್ಮ:** ಮೊದಲು ನಿನ್ನ ಕೈಯಲ್ಲಿರುವ ಮೊಬೈಲ್ ಅನ್ನು ಕುಟ್ಟಿ ಪುಡಿ ಪುಡಿ ಮಾಡಬೇಕು!

***

ಒಮಿಕ್ರಾನ್ ಭೀತಿ : ಸಭೆ, ಸಮಾರಂಭ, ಪ್ರತಿಭಟನೆ ನಿರ್ಬಂಧ



ಎರಡನೆಯ ಅಲೆಗೆ ವರ್ಕೌಟ್ ಆದಂತೆ ಮೂರನೆಯ ಅಲೆಗೂ ಆಗ್ತದೆ ಸರ್. ಆಗ ಬಸ್ ಸಿಬ್ಬಂದಿ ಹರತಾಳ, ಈಗ ಪಾದಯಾತ್ರೆ!

**ನಟಿ:** ಸರ್, ದೆವ್ವದ ಪಾತ್ರಕ್ಕಾಗಿ ನನಗಿನ್ನೂ ಮೇಕಪ್ ಹಾಕಿಲ್ಲ?
**ನಿರ್ದೇಶಕ:** ಮೇಡಂ, ಅದು ಸಹಜವಾಗಿ ಇರಲಿ ಅಂತ ನಿಮಗೆ ಮೇಕಪ್ ಹಾಕೋದು ಬೇಡ ಅಂತ ನಾನೇ ಹೇಳಿದ್ದೆ!

***

**ಆಟೊ ಚಾಲಕ:** ಕ್ಷಮಿಸಿ ಸರ್, ಆತುರದಲ್ಲಿ ಮೀಟರ್ ಹಾಕುವುದನ್ನು ಮರೆತೆ!
**ಪ್ರಯಾಣಿಕ:** ಪರವಾಗಿಲ್ಲ ಬಿಡಿ, ನಾನೂ ಕಾಸಿದ್ದ ಪಾಕೆಟ್ ಅನ್ನೇ ಮರೆತು ಬಂದಿದ್ದೇನೆ!

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**

**ಶಿಕ್ಷಕ:** ದಿನಕ್ಕೊಂದು ಸೇಬು ತಿಂದರೆ ವೈದ್ಯರಿಂದ ದೂರ ಇರಬಹುದು.
**ವಿದ್ಯಾರ್ಥಿ:** ಅದೇನ್ ಬಿಡಿ ಸರ್, ಕೊರೊನಾ ಬಂದ್ರೂ ಎಲ್ಲರಿಂದ ದೂರ ಇರಬಹುದು!

***

**ಆತ:** ಮನುಷ್ಯನಿಗೆ ಬೆಲೆ ಇರಬೇಕು.
**ಈತ:** ಬೆಲೆ ಇರಬಾರದು ಸರ್.
**ಆತ:** ಯಾಕೋ ಹಾಗಂತೀಯ?
**ಈತ:** ಇದ್ರೆ ಮನೆಯವರೇ ಮಾರಿ ಬಿಡ್ತಾರೆ ಅದಕ್ಕೆ ಸರ್!

***

**ಅಪ್ಪ:** ಇಂಗ್ಲಿಷ್ ಟೆಸ್ಟ್‌ನಲ್ಲಿ ಒಂದೇ ಒಂದು ಅಂಕ ತಗೊಂಡಿದ್ದೀಯ ನಿನಗೆ ನಾಚಿಕೆ ಆಗಲ್ವಾ?
**ಮಗ:** 'ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು' ಅಂತ ನೀವೇ ಹೇಳ್ತಾ ಇದ್ರಲ್ಲ ಅಪ್ಪ ಅದಕ್ಕೆ ನಾನು 10 ಅಂಕಕ್ಕೆ 1 ಅಂಕ ತಗೊಂಡಿದ್ದೀನಿ.

***

**ಪರೀಕ್ಷೆ:** ಒಂದು ಗಾದೆಯ ಬಗ್ಗೆ ವಿಸ್ತರಿಸಿ ಬರೆಯಿರಿ.
**ಉತ್ತರ:** ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ, ಮತ್ತೆ ಮುನಿದರೆ ಹೆಮ್ಮಾರಿ, ಮತ್ತಷ್ಟು ಮುನಿದರೆ ಪರಾರಿ.

***

**ಆತ:** ನಿಮ್ಮ ಸಿನಿಮಾದ ಬಗ್ಗೆ ಭಾರಿ ಪ್ರಚಾರ ಮಾಡ್ತಾ ಇದ್ದೀರಲ್ಲ. ಯಾಕೆ?
**ನಿರ್ಮಾಪಕ:** ಮೊದಲ ವಾರವೇ ಒಂದಷ್ಟು ದುಡ್ಡು ಮಾಡೋಣ ಅಂತ.
**ಆತ:** ಆಮೇಲೆ?
**ನಿರ್ಮಾಪಕ:** ಆಮೇಲೆ ಫ್ರೀ ಅಂದ್ರೂ ನಮ್ ಸಿನಿಮಾ ನೋಡೋಕೆ ಜನ ಬರಲ್ಲ ಅದಕ್ಕೆ.

***

**ಅಪ್ಪಣ್ಣ:** ನಿನ್ನ ಹೆಂಡತಿ ಲಟ್ಟಣಿಗೆಯಿಂದ ಹೊಡೆದ್ರೂ ತಿರುಗಿಸಿ ಹೊಡೆಯದೆ ಸುಮ್ನಿದ್ದೀಯಲ್ಲ?
**ತಿಪ್ಪಣ್ಣ:** ತಿರುಗಿಸಿ ಹೊಡೆಯೋಕೆ ನನಗೆ ಧೈರ್ಯ ಇಲ್ಲವಯ್ಯ.
**ಅಪ್ಪ:** ಹೋಗ್ಲಿ, ಪೊಲೀಸ್ ಠಾಣೆಗೆ ಹೋಗಿ ಇನ್‌ಸ್ಪೆಕ್ಟರ್‌ಗೆ ದೂರನ್ನಾದ್ರೂ ಕೊಡೋದಲ್ವಾ?
**ತಿಪ್ಪಣ್ಣ:** ಈ ಏರಿಯಾದ ಇನ್‌ಸ್ಪೆಕ್ಟರ್ ನಾನೇ ಅಲ್ವೇನಯ್ಯ!

***

ಪಂಜಾಬ್ ಭೇಟಿ ವೇಳೆ ಫ್ಲೈಓವರ್‌ನಲ್ಲಿ ರಸ್ತೆತಡೆ




ಇಲ್ಲಿನ ಸಂಚಾರಿ ನಿಯಮ ವಿಚಿತ್ರವಾಗಿದೆ. 20 ನಿಮಿಷ ಕಾದರೂ ಸಿಗ್ನಲ್ ಬೀಳಲಿಲ್ಲ!

**ಅಪ್ಪಣ್ಣ:** ವಯಸ್ಸು ನಲವತ್ತೈದು ಆದ್ರೂ ಒಂಚೂರೂ ಹೊಟ್ಟೆ ಬಂದಿಲ್ಲ ಅಲ್ವಾ, ಅದರ ಗುಟ್ಟೇನು?
**ತಿಪ್ಪಣ್ಣ:** ಹೆಂಡತಿ ಹೇಳಿದಂತೆ ಮನೆ ಕೆಲಸ ಮಾಡಿಕೊಂಡಿರೋದೇ ಹೊಟ್ಟೆ ಬರಿಸಿಕೊಳ್ಳದ ಗುಟ್ಟು.

***

**ಅಪ್ಪಣ್ಣ:** ನಮ್ಮ ಪಕ್ಷದಲ್ಲಿ ಭಿನ್ನಮತವೂ ಇಲ್ಲ, ಬಂಡಾಯವೂ ಇಲ್ಲ.
**ತಿಪ್ಪಣ್ಣ:** ನಮ್ಮ ಪಕ್ಷದಲ್ಲಿ ಅವೆರಡೂ ಇದೆ. ಭಿನ್ನಮತ, ಬಂಡಾಯ ಮನೋಭಾವದ ಧೈರ್ಯವಂತರು ನಮ್ಮ ಪಕ್ಷದಲ್ಲಿದ್ದಾರೆ ಅನ್ನುವುದೇ ನಮ್ಮ ಹೆಮ್ಮೆ.

***

**ಅಪ್ಪಣ್ಣ:** ದೇವರು ದೊಡ್ಡೋನು ಅಂತ ಆಗಾಗ ಹೇಳ್ತಾ ಇರ್ತೀರಲ್ಲ, ಯಾವ ಆಧಾರದ ಮೇಲೆ ಹೇಳ್ತೀರಾ?
**ತಿಪ್ಪಣ್ಣ:** ನಮ್ಮ ತಾತ, ಅವರ ತಾತನ ಕಾಲದಿಂದಲೂ ಇರುವ ದೇವರೇ ಈಗಲೂ ಇರೋದು. ಹೀಗಾಗಿ ಸಹಜವಾಗಿ ಅವರಿಗೆ ವಯಸ್ಸಾಗಿರುತ್ತದೆ. ಅದಕ್ಕೆ ದೇವರು ದೊಡ್ಡೋನು ಅನ್ನೋದು!

***

**ತಿಪ್ಪಣ್ಣ:** ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ ಯಾಕೆ?
**ಅಪ್ಪಣ್ಣ:** ಅವುಗಳಿಗೆ ಕಿವಿಗಳಿರುವುದಿಲ್ಲ ಅದಕ್ಕೆ!

ಸಂಗ್ರಹ: **ಮಲ್ಲಿಕಾರ್ಜುನ, ಸುರದೇನಪುರ**